**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಸೇಡಂ.**

ಸಿ.ಸಿ. ನಂ: 296/2016

ಫಿರ್ಯಾದಿ: ಕರ್ನಾಟಕ ಸರಕಾರ ಪರ ಮಳಖೇಡ ಪೋಲೀಸ್ ಠಾಣೆ

//ವಿರುದ್ಧ//

ಆರೋಪಿ :1 ಅಂಬಣ್ಣ @ ಅಂಬ್ರಿಶ ತಂದೆ ಯಂಕಪ್ಪ ವಡ್ಡರ
ವ: 20 ವರ್ಷ, ಉ: ಟ್ರಾಕ್ಟರ ಚಾಲಕ
ಸಾ: ಮಳಖೇಡ ಗ್ರಾಮ, ತಾ: ಸೇಡಂ,
ಜಿ: ಕಲಬುರಗಿ

2. ಮಂಜು ತಂದೆ ತಿಪ್ಪಣ್ಣ ಪೂಜಾರಿ
ವ: 20 ವರ್ಷ, ಉ: ಕೂಲಿ
ಸಾ: ಬಿಬ್ಬಳ್ಳಿ ಗ್ರಾಮ, ತಾ: ಸೇಡಂ

3. ತಿರುಪತಿ ತಂದೆ ಯಂಕಪ್ಪ ವಡ್ಡರ
ವ: 22 ವರ್ಷ, ಉ: ಕೂಲಿ
ಸಾ: ಮಳಖೇಡ ಗ್ರಾಮ, ತಾ: ಸೇಡಂ

---

**ಆಪಾದನೆ**

ನಾನು ಶ್ರೀ ಬಾಲು, ಬಿಎ.,ಎಲ್.ಎಲ್.ಬಿ., ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರು, ಸೇಡಂ, ನಿಮ್ಮ ಮೇಲೆ ಹೊರಿಸುವ ಆರೋಪವೇನೆಂದರೆ,

ದಿನಾಂಕ 24-01-2016 ರಂದು ರಾತ್ರಿ 01.35 ಗಂಟೆಗೆ ಮಳಖೇಡ ಪೋಲೀಸ ಠಾಣೆಯ ಹದ್ದಿಯ ಪೈಕಿ ಮಳಖೇಡ ಗ್ರಾಮದ ಹತ್ತಿರ ಇದ್ದ ರಿವರ ಬೆಡ್ನ ಕಾಗಿಣಾ ನದಿಯಲ್ಲಿ ಆರೋಪಿ.1 ರಿಂದ 3 ರವರು ಕೂಡಿಕೊಂಡು ಅಕ್ರಮವಾಗಿ ಕಳ್ಳತನದಿಂದ ಸರಕಾರದ ಯಾವುದೇ ರಾಜಧನ ಪರವಾನಿಗೆ ಪತ್ರ ಇಲ್ಲದೆ ಮರಳು ತುಂಬುತ್ತಿದ್ದಾಗ ಖಚಿತ ಪಡಿಸಿಕೊಂಡು ಚಾಸಾ.1 ಮತ್ತು 4 ರಿಂದ 6 ರವರು ಕೂಡಿ ಚಾಸಾ.2 ಮತ್ತು 3 ನೇದ್ದವರ ಸಮಕ್ಷಮದಲ್ಲಿ ದಾಳಿ ಮಾಡಿ ಆರೋಪಿತರಿಗೆ ಹಿಡಿಯಲು ಹೋದಾಗ ತಮ್ಮ ಉಸುಕು ತುಂಬುತ್ತಿದ್ದ ಟ್ರಾಕ್ಟರ ನಂ. KA-32-TA-0104 ಮತ್ತು ಟ್ರಾಲಿ ನಂ. KA-32 TA-0105 ನೇದ್ದನ್ನು ಅಲ್ಲಿಯೇ ಬಿಟ್ಟು ಆರೋಪಿ 3ನೇದ್ದವನು ಓಡಿ ಹೋಗಿದ್ದು ಸದರಿ ಆರೋಪಿತರು ಟ್ರಾಕ್ಟರದಲ್ಲಿ ಸಾಗಿಸಲು ಟ್ರಾಕ್ಟರ ಟ್ರಾಲಿಯಲ್ಲಿ 10-15 ಬುಟ್ಟಿಯಷ್ಟು ಉಸುಕು ತುಂಬಿದ್ದು ಹಾಗೂ ಸದರಿ ಮರಳು ತುಂಬಿದ ವಾಹನವನ್ನು ಜಪ್ತಿ ಮಾಡಿದ್ದು ಇರುತ್ತದೆ, ಆ ಮೂಲಕ ಆರೋಪಿತನಾದ ನೀನು ಭಾ.ದಂ.ಸಂ.ಕಲಂ 379 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನೆಸಗಿದ್ದು ನನ್ನ ಸಂಜ್ಞೆಯಲ್ಲಿ ಬಂದಿರುತ್ತದೆ.

ಕಾರಣ ಮೇಲೆ ಹೇಳಿದ ಅಪರಾಧಗಳಿಗಾಗಿ ವಿಚಾರಣೆ ಎದುರಿಸಬೇಕೆಂದು ನಿರ್ದೇಶಿಸುತ್ತಿದ್ದೇನೆ.

ಸಿ.ಸಿ. ನಂಃ 296/2016

---

**ಆರೋಪಿತರ ಹೇಳಿಕೆ**

ಪ್ರಃ 1 ಈ ಮೇಲ್ಕಂಡಂತೆ ಓದಿ ಹೇಳಲಾದ ದೋಷಾರೋಪಣೆಯನ್ನು ಕೇಳಿ ತಿಳಿದುಕೊಂಡಿರುವಿರಾ?

ಉಃ ಆ-1

ಆ-2

ಪ್ರಃ 2 ನಿಮ್ಮ ತಪ್ಪನ್ನು ಒಪ್ಪಿಕೊಳ್ಳುತ್ತಿರೋ ಅಥವಾ ವಿಚಾರಣೆ ನಡೆಯಬೇಕಾ?

ಉಃ ಆ-1

ಆ-2

(ದೋಷಾರೋಪಣೆಯನ್ನು ಆರೋಪಿತರಿಗೆ ಓದಿ ಹೇಳಿದ್ದು ಅವರು ನೀಡಿದ ಹೇಳಿಕೆಯನ್ನು ಯಥಾವತ್ತಾಗಿ ದಾಖಲಿಸಿದ್ದು ಅದು ಸಂಪೂರ್ಣ ಸತ್ಯವಾಗಿರುತ್ತದೆಂದು ಪ್ರಮಾಣೀಕರಿಸುತ್ತೇನೆ)

ಸಹಿ/-

ದಿನಾಂಕಃ 08-01-2026 ಪ್ರ.ದ.ನ್ಯಾ.ದಂ. ಸೇಡಂ.